C.C– 1081/2025

ಪಿ. ಡಬ್ಲೂ – 1

ಸಾಕ್ಷಿಯನ್ನು ದಿಃ 02.09.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ಕೆ.ಪಿ ರವರಿಂದಃ**

ನಾನು ವ್ಯವಸಾಯ ಮಾಡುತ್ತಿದ್ದು, ನನಗೆ 2 ಎಕರೆ ಜಮೀನು ಇದೆ. 1 ಎಕರೆ ಜಮೀನಿಗೆ ಸುಮಾರು 15 ಕ್ವಿಂಟಲ್ ಅಡಿಕೆ ಬರುತ್ತದೆ. ನನಗೆ ಜಮೀನು ಇರುವ ಬಗ್ಗೆ ಆರ್.ಟಿ.ಸಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅಗತ್ಯವಿದ್ದರೆ ಅದನ್ನು ಹಾಜರು ಪಡಿಸಬಲ್ಲೆ. 1 ಎಕರೆ ಜಮೀನಿನಲ್ಲಿ 15 ಕ್ವಿಂಟಲ್ ಅಡಿಕೆಯನ್ನು ಬೆಳೆಯಲು ಆಗುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನಿಗೆ ಸಾಲ ಕೊಡುವಾಗ ನನ್ನ ಬ್ಯಾಂಕಿನಲ್ಲಿ ನನ್ನ ಖಾತೆಯಲ್ಲಿ ಅಂದಾಜು 1–1.5 ಲಕ್ಷ ಹಣ ಇತ್ತು. ಆರೋಪಿತನಿಗೆ ಕನ್ನಡ ಮತ್ತು ಇಂಗ್ಲೀಷ್ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣ ಮತ್ತು ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತನ ವಿರುದ್ಧ ನಾನು ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.